■ ಹನಿ

## ಪ್ರಧಾನಿಯ ಸರ್ಕಸ್

ದೇಶದ ಪ್ರಧಾನಮಂತ್ರಿ ಟ್ಯಾಕ್ಸಿ ಡ್ರೈವರ್ ಆಗಿ ಒಂದಿಡೀ ದಿನ ನಗರ ಸಂಚಾರ ನಡೆಸಿದರೆ ಹೇಗಿರಬಹುದು? ನಮ್ಮ ದೇಶದಲ್ಲಿ ಅದು ಸಾಧ್ಯವಿಲ್ಲ, ಬಿಡಿ. ಆದರೆ ದೂರದ ನಾರ್ವೆ ದೇಶದ ಪ್ರಧಾನಿ ಆ ಕೆಲಸ ಮಾಡಿದ್ದಾರೆ. ನಾರ್ವೆಯ ಪ್ರಧಾನಿ ಜೆನ್ಸ್ ಸ್ಟಾಲ್ಟೆನ್‌ಬರ್ಗ್ ಕಳೆದ ವಾರ ಸ್ವತಃ ಟ್ಯಾಕ್ಸಿ ಓಡಿಸುತ್ತಾ ಜನರ ನಾಡಿಮಿಡಿತ ಅರಿಯಲು ಯತ್ನಿಸಿದ್ದಾರೆ. ಇನ್ನೇನು ಸೆಪ್ಟೆಂಬರ್ 9ರಂದು ಆ ದೇಶದ ಸಂಸತ್ ಚುನಾವಣೆ ನಡೆಯಲಿದೆ. ಅದಕ್ಕೂ ಮುನ್ನ ಜನರ ನಾಡಿಮಿಡಿತ ಅರಿಯಲು ಜೆನ್ಸ್ ಸ್ಟಾಲ್ಟೆನ್ಬರ್ಗ್ ಯತ್ನಿಸಿದ್ದಾರೆ.

ಹಲವು ಪ್ರಯಾಣಿಕರನ್ನು ಅವರು ಹೇಳಿದಲ್ಲಿಗೆ ಕರೆದೊಯ್ದ ಪ್ರಧಾನಿ ಜೆನ್ಸ್ ಒಬ್ಬರಿಂದಲೂ ಹಣ ಪಡೆಯಲಿಲ್ಲವಂತೆ. 'ಏನಯ್ಯಾ, ಇಷ್ಟು ರ್‍ಯಾಶ್ ಆಗಿ ಡ್ರೈವಿಂಗ್ ಮಾಡ್ತೀಯ?' ಎಂದೊಬ್ಬರು ಗದರಿಸಿದರೆ, ಇನ್ನೊಬ್ಬ ಪ್ರಯಾಣಿಕ 'ಈ ಕೋನದಿಂದ ನೀನು ಥೇಟ್ ನಮ್ಮ ಪ್ರಧಾನಿಯ ತರಹವೇ ಕಾಣ್ತೀಯ' ಎಂದು ಮೆಚ್ಚುಗೆ ಪಡೆದರಂತೆ! ಕಾರಿನಲ್ಲಿದ್ದ ಸೀಕ್ರೆಟ್ ಕ್ಯಾಮೆರಾದಲ್ಲಿ ಪ್ರಧಾನಿ ಜೆನ್ಸ್ ಎಲ್ಲವನ್ನೂ ಚಿತ್ರೀಕರಿಸಿದ್ದಾರಂತೆ. ಹಾಗೆಂದು ಅವರೇ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದಿದ್ದಾರೆ.



ಈ ಜನಾಭಿಪ್ರಾಯದ ಸರ್ಕಸ್ ಏನೇ ಇರಲಿ, ಚುನಾವಣೆಯಲ್ಲಿ ಜೆನ್ಸ್ ಅವರ ಲೇಬರ್ ಪಾರ್ಟಿ ಗೆಲ್ಲುವುದು ಕಷ್ಟ ಎಂಬ ವರದಿಗಳಿವೆ. 2005ರಲ್ಲಿ ಅಧಿಕಾರಕ್ಕೆ ಬಂದ ಜೆನ್ಸ್ ಅತ್ಯಂತ ಕಠಿಣ ಸವಾಲುಗಳನ್ನು ಈ ಅವಧಿಯಲ್ಲಿ ಎದುರಿಸಿದ್ದಾರೆ. 2011ರಲ್ಲಿ ರಾಜಧಾನಿ ಓಸ್ಲೋದಲ್ಲಿ ಪ್ರಧಾನಿ ನಿವಾಸದ ಹೊರಗೆ ಉಗ್ರಗಾಮಿಗಳು ನಡೆಸಿದ ಬಾಂಬ್‌ದಾಳಿಯೂ ಈ ನಿಟ್ಟಿನಲ್ಲಿ ಒಂದು.

ಯುವಕನಾಗಿದ್ದಾಗ ಜೆನ್ಸ್ ಕೂಡಾ ಸಿಪಿಎಂ (ಎಲ್) ಪಕ್ಷದಲ್ಲಿ ಇದ್ದವರೇ. ಅಧಿಕಾರಸ್ಥರ ಮನೆಗೆ ಕಲ್ಲು ಹೊಡೆದು ಪೊಲೀಸರ ಕೈಯಿಂದ ತಪ್ಪಿಸಿಕೊಂಡು ತಿರುಗಾಡಿದವರೇ. ನಿರೀಶ್ವರವಾದಿಯಾಗಿದ್ದು ಸಂಪ್ರದಾಯಸ್ಥ ಪಕ್ಷದ ನಾಯಕರ ಕೆಂಗಣ್ಣಿಗೆ ಗುರಿಯಾದವರೇ. ಆದರೆ ಪ್ರಧಾನಿ ಹುದ್ದೆ ಅವರನ್ನು ಸೌಮ್ಯವಾದಿಯನ್ನಾಗಿಸಿದೆ. ರಾಜಕೀಯಕ್ಕೆ ಸೇರುವ ಮುನ್ನ ಪತ್ರಕರ್ತನೂ ಆಗಿದ್ದ ಜೆನ್ಸ್, ತನ್ನ ನಿಕಟ ಗೆಳೆಯನೊಬ್ಬ ರಶ್ಯಾದ ಕೆಜಿಬಿ ಏಜೆಂಟ್ ಎಂದು ಗೊತ್ತಾದಾಕ್ಷಣ ಆತನ ಜತೆಗೆ ಸಂಪರ್ಕ ಕಡಿದುಕೊಂಡದ್ದು ಹಿಂದೊಮ್ಮೆ ವಿವಾದವಾಗಿತ್ತು. ಅಧಿಕಾರದ ಕೊನೆಯ ಹಂತದಲ್ಲಿ ಪಕ್ಷದ ಮತ್ತು ದೇಶದ ಜನರ ವಿಪರೀತ ನಿರೀಕ್ಷೆಗಳನ್ನು ತಾಳಿಕೊಳ್ಳುವುದು ಜೆನ್ಸ್‌ಗೂ ಕಷ್ಟವಾದಂತಿದೆ. ಅದೇನೇ ಇದ್ದರೂ, 8 ವರ್ಷಗಳ ಕಾಲ ಕಾರು ಡ್ರೈವಿಂಗ್ ಮಾಡದೇ ಇದ್ದ ಪ್ರಧಾನಿಯೊಬ್ಬ ಜನರ ನಾಡಿಮಿಡಿತ ಅರಿಯಲು ಗುಟ್ಟಾಗಿ ಟ್ಯಾಕ್ಸಿ ಡ್ರೈವರ್ ಆಗಿದ್ದಂತೂ ರೋಚಕ ಸಂಗತಿಯೇ.



## ದುರ್ಗಾ ಎಂಬ ಶಕ್ತಿ

ಆಗ್ರಾ ಎಂದರೆ ತಾಜ್‌ಮಹಲ್ ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಈಗ ಆಗ್ರಾ ಎಂದರೆ ದುರ್ಗಾಶಕ್ತಿ ನಾಗಪಾಲ್ ಎನ್ನುವುದೂ ಇಡೀ ರಾಷ್ಟ್ರಕ್ಕೆ ಗೊತ್ತಾಗಿದೆ. ಆಗ್ರಾದಲ್ಲಿ ಹುಟ್ಟಿದ ದುರ್ಗಾಶಕ್ತಿ ನಾಗಪಾಲ್, ಉತ್ತರ ಪ್ರದೇಶದ ಐಎಎಸ್ ಅಧಿಕಾರಿಯಾಗಿ ದಕ್ಷತೆಯಿಂದ ಕೆಲಸ ಮಾಡಿದ್ದೇ ಆಕೆಗೆ ಮುಳುವಾಗಿದೆ. ಗ್ರೇಟರ್ ನೋಯಿಡಾದ ಜಿಲ್ಲಾಧಿಕಾರಿಯಾಗಿ ಮರಳು ಮಾಫಿಯಾದ ಹುಟ್ಟಡಗಿಸಲು ಯತ್ನಿಸಿದ ಆಕೆಗೆ ಉತ್ತರ ಪ್ರದೇಶ ಸರಕಾರ 'ಸಸ್ಪೆಂಡ್ ಬಹುಮಾನ' ನೀಡಿದೆ. ಈ ವಿವಾದ ಈಗ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಾಗಿ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿದೆ.

ದುರ್ಗಾಶಕ್ತಿ ಅವರ ಕುಟುಂಬ ಮೂಲ ಛತ್ತೀಸ್‌ಗಢ. ಪಂಜಾಬ್ ಕೇಡರ್‌ನಲ್ಲಿ ಐಎಎಸ್ ಆದ ದುರ್ಗಾ ಬಳಿಕ ಉತ್ತರ ಪ್ರದೇಶ ಕೇಡರ್‌ಗೆ ವರ್ಗ ಆದರು. 2009ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 20ನೇ ರ್‍ಯಾಂಕ್ ಗಳಿಸಿದ್ದ ಈ ಪ್ರತಿಭಾವಂತೆ ಕಂಪ್ಯೂಟರ್ ಸೈನ್ಸ್ ಪದವೀಧರೆ. ಯಮುನಾ ತೀರದಲ್ಲಿ ಅಕ್ರಮ ಮರಳು ತೆಗೆಯುತ್ತಿದ್ದವರ ವಿರುದ್ಧ ಸಮರ ಸಾರಿದ್ದೇ ಆಕೆಯ ಅಮಾನತಿಗೆ ಕಾರಣ. ಯಾವುದೋ ಮಸೀದಿಯ ಅಕ್ರಮ ಗೋಡೆ ಒಡೆದರು ಎನ್ನುವುದು ಆಳುವವರಿಗೊಂದು ಪಿಳ್ಳೆ ನೆವ.

ಇನ್ನೂ 28ರ ಹರೆಯದ ದುರ್ಗಾಶಕ್ತಿ ತನ್ನ ಪ್ರಾಮಾಣಿಕತೆಯಿಂದಾಗಿ ದೇಶದ ಯುವಜನರ ಕಣ್ಮಣಿಯಾಗಿರುವುದಂತೂ ನಿಜ. ಆಕೆಯ ತಂದೆ ರಾಜಸ್ತಾನದಲ್ಲಿ ಸರ್ಕಾರಿ ನೌಕರಿಯಲ್ಲಿದ್ದು ನಿಸ್ಪೃಹ ಸೇವೆಗಾಗಿ ರಾಷ್ಟ್ರಪತಿ ಪದಕವನ್ನೂ ಗಳಿಸಿದ್ದರು. ಆಕೆಯ ಅಜ್ಜ ದೆಹಲಿಯಲ್ಲಿ ಪೊಲೀಸ್ ಅಧಿಕಾರಿಯಾಗಿದ್ದು ಕರ್ತವ್ಯದಲ್ಲಿ ಇರುವಾಗಲೇ ಕೊಲೆಯಾಗಿದ್ದರು. ಮರಳು ಮಾಫಿಯಾದ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡಿದ್ದ ದುರ್ಗಾಶಕ್ತಿ ವಿರುದ್ಧ ಏಪ್ರಿಲ್ ತಿಂಗಳಲ್ಲಿ ಹಲ್ಲೆ ಯತ್ನವೂ ನಡೆದಿತ್ತು. ಆದರೆ ಗಟ್ಟಿಗಿತ್ತಿ ದುರ್ಗಾ ಎಲ್ಲವನ್ನೂ ಛಲದಿಂದ ಎದುರಿಸಿದ್ದಾರೆ. ಆಕೆಯ ಪತಿ ಅಭಿಶೇಕ್ ಸಿಂಗ್ ಕೂಡಾ ಐಎಎಸ್ ಅಧಿಕಾರಿಯಾಗಿದ್ದು ಪತ್ನಿಗೆ ಬೆಂಬಲ ನೀಡುತ್ತಿದ್ದಾರೆ. ಸದ್ಯಕ್ಕೆ ಎಲ್ಲರ ಕಣ್ಣು ಸುಪ್ರೀಂಕೋರ್ಟ್ ಮೇಲಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65